ದಿ : 18-12-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆ:- ವಾದಿ ಪರ ವಕೀಲರಿಂದ

1) ನನ್ನ ತಾಯಿಯಾದ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರ ನಡುವೆ ದಿನಾಂಕ 08-06-1965 ರಂದು ಆಗಿರುವ ವಿಭಾಗ ಪತ್ರದ ದೃಢೀಕೃತ ನಕಲು
2) 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಪರವಾಗಿ ದಿನಾಂಕ 23-02-2016 ರಂದು ಮಾಡಿಕೊಟ್ಟಿರುವ ಹಕ್ಕು ಬಿಡುಗಡೆ ಪತ್ರ
3) ನನ್ನ ತಂದೆಯು 2 ನೇ ಪ್ರತಿವಾದಿಯ ಪರವಾಗಿ ದಿನಾಂಕ 19-08-2023 ರಂದು ಬರೆದುಕೊಟ್ಟಿರುವ ಹಕ್ಕು ಬಿಡುಗಡೆಯ ಪತ್ರ
4) ನಾನು ಅನಾರೋಗ್ಯದಿಂದ ಬಳಲುತ್ತಿರುವ ಬಗ್ಗೆ ವೈದ್ಯರು ನೀಡಿರುವ ಪ್ರಮಾಣ ಪತ್ರ
5) ದಾವಾ ಜಮೀನುಗಳಿಗೆ ಸಂಬಂಧಿಸಿದ ಒಟ್ಟು 15 ಗಣಕೀಕೃತ ಪಹಣಿ ಪತ್ರಿಕೆಗಳನ್ನುಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಪಿ -1 ರಿಂದ 19 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತೇನೆ.

ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಂದಾಪುರ